# ಈಗಷ್ಟೇ ಅದ್ಧೂರಿ ಆರಂಭ



**ಸಂಗೀತಾ**

**ಸುವರ್ಣದ ‘ಹರಹರ ಮಹಾದೇವ’ದ ಸತಿ**

★ *ನಿಮ್ಮ ಬಗ್ಗೆ ಹೇಳುವುದಾದರೆ?*

ನಮ್ಮ ಮೂಲ ಶೃಂಗೇರಿ. ತಂದೆ ಏರ್‌ಫೋರ್ಸ್‌ನಲ್ಲಿ ಇದ್ದಿದ್ದರಿಂದ ಸ್ವಲ್ಪ ಸುತ್ತಾಡಿದೆ. ಕೇಂದ್ರೀಯ ವಿದ್ಯಾಲಯದಲ್ಲಿ ಓದಿದೆ. ಬೆಂಗಳೂರಿನ ಅಮ್ಮಣ್ಣಿ ಕಾಲೇಜಿನಲ್ಲಿ ಪದವಿ ಮಾಡಿದೆ. ಆಗ ನಾನು ‘ಮಿಸ್ ಅಮ್ಮಣ್ಣಿ’ ಪ್ರಶಸ್ತಿ ಕೂಡ ಪಡೆದಿದ್ದೆ. ಆ ಕ್ಷಣ ನನ್ನಲ್ಲಿ ನಟನೆಯ ಬೀಜ ಮೊಳಕೆಯೊಡೆಯಲು ಕಾರಣವಾಯಿತು. ಅದಕ್ಕೆ ನನ್ನ ಸಹಪಾಠಿಗಳ ಒತ್ತಾಸೆ ಕೂಡ ಇತ್ತು. ಮನೆಯಲ್ಲಿಯೂ ನಿರ್ಬಂಧ ಇರಲಿಲ್ಲ. ಮಾಡೆಲಿಂಗ್ ಮಾಡಿದೆ. ಅದೇ ಸಂದರ್ಭದಲ್ಲಿ ‘ಕರ್ಣ’ ಎಂಬ ಕಿರುಚಿತ್ರದಲ್ಲಿ ನಟಿಸಿದೆ. ಟ್ರೇಲರ್ ಬಿಡುಗಡೆಯಾಯಿತು. ಅದನ್ನು ನೋಡಿ ‘ಹರಹರ ಮಾಹಾದೇವ’ಕ್ಕೆ ಆಡಿಷನ್‌ಗೆ ಕರೆ ಬಂತು. ನಾನು ಆಯ್ಕೆಯಾದೆ. ಯಾವುದೇ ಪ್ರಭಾವ ಇಲ್ಲದೆ ಅವಕಾಶ ಪಡೆದಿರುವುದು ಸಂತೋಷದ ಸಂಗತಿ.

★ *ನಟನೆಯ ಆರಂಭದ ದಿನಗಳು ಹೇಗೆನಿಸುತ್ತಿವೆ?*

ಈ ಧಾರಾವಾಹಿಯ ಮೂಲಕ ವೃತ್ತಿಪರವಾಗಿ ಪ್ರವೇಶ ಪಡೆಯುತ್ತಿದ್ದೇನೆ. ಅತ್ಯಂತ ಅದ್ಧೂರಿ ಧಾರಾವಾಹಿ. ಮುಂಬೈಯಲ್ಲಿ ಕಳೆದ ಒಂದು ತಿಂಗಳಿಂದ ಚಿತ್ರೀಕರಣ ನಡೆಯುತ್ತಿದೆ. ಇಲ್ಲಿನ ಸೆಟ್ ನೋಡಿದರೆ ನೋಡುತ್ತಲೇ ಇರೋಣ ಎನ್ನಿಸುತ್ತದೆ. ಇಂದ್ರಲೋಕದ ವೈಭವ ಇಲ್ಲಿ ಮೈದಳೆದಂತಿದೆ. ನಿರ್ದೇಶಕರು ತುಂಬಾ ಅಕ್ಕರೆಯಿಂದ ನೋಡಿಕೊಳ್ಳುತ್ತಾರೆ. ಒಟ್ಟಾರೆ ತುಂಬಾ ಖುಷಿಯಿಂದ ಇಡೀ ತಂಡವೇ ಇದೆ.

★ *ನಿಮ್ಮ ವಿದ್ಯಾರ್ಥಿ ಜೀವನದ ಸಾಧನೆ ಬಗ್ಗೆ ಹೇಳಿ?*

ಎನ್‌ಸಿಸಿ ಕೆಡೆಟ್ ಆಗಿದ್ದೆ. ಅಲ್ಲಿ ನಾಯಕತ್ವದ ಪಾತ್ರ ನಿರ್ವಹಿಸಿದ್ದ ನನಗೆ ಕ್ರೀಡೆ ಎಂದರೆ ಇಷ್ಟ. ಖೋ ಖೋದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆದಿದ್ದೇನೆ. ಅಥ್ಲೇಟ್ ಕೂಡ ಹೌದು. ನಾನು ಒಮ್ಮೆ ಭಾರತವನ್ನು ಪ್ರತಿನಿಧಿಸಿದ್ದೆ. ಹೀಗಿರುವಾಗ ಚೇಂಜ್ ಎನ್ನುವಂತೆ ಸಿನಿ ಲೋಕಕ್ಕೆ ಪ್ರವೇಶಿಸಿದ್ದೇನೆ. ಅದ್ಧೂರಿಯಿಂದಲೇ ಆರಂಭವಾಗಿದೆ. ಮುಂದಿನ ದಾರಿಯನ್ನು ನೋಡಬೇಕು.

★ *ಪಾತ್ರ ಹೇಗಿದೆ? ಕಥೆ ಎಲ್ಲಿದೆ?*

ಕಥೆಯ ಕುತೂಹಲ ಉಳಿದಿರಲಿ. ತೆರೆಯ ಮೇಲೆಯೇ ಅನಾವರಣಗೊಳ್ಳಲಿ. ದಕ್ಷನ ಮಗಳ ಪಾತ್ರ. ಅಪ್ಪನ ಮುದ್ದಿನ ಮಗಳು. ಚಂದದಿಂದ ಸಾಕಿ ದೊಡ್ಡವಳನ್ನಾಗಿ ಮಾಡಿದ್ದಾರೆ. ಪಾತ್ರದ ವಿಷಯಕ್ಕೆ ಬಂದರೆ ತುಂಬಾ ಸವಾಲನ್ನು ಬಯಸುವಂತಹದ್ದು.

★ *ಫಿಟ್ನೆಸ್ ಕಾಪಾಡುವ ತಂತ್ರವೇನು?*

ನಿತ್ಯವೂ ಬೆಳಿಗ್ಗೆ 5 ಗಂಟೆಗೆ ಎದ್ದು ಜಾಗಿಂಗ್ ಹೋಗುತ್ತೇನೆ. ಜೊತೆಗೆ ಯೋಗ ಮಾಡುತ್ತೇನೆ. ಮೊದಲಿನಿಂದಲೂ ಆಟೋಟ ನನ್ನ ಮೊದಲ ಆಯ್ಕೆಯಾಗಿತ್ತು. ಆದಷ್ಟು ಚಟುವಟಿಕೆಯಿಂದ ಇರುತ್ತೇನೆ. ಊಟೋಪಚಾರದಲ್ಲಿ ಕಟ್ಟುನಿಟ್ಟಾಗಿದ್ದೇನೆ. ನನ್ನ ಆಹಾರ ಕ್ರಮದಲ್ಲಿ ಹೆಚ್ಚಿನ ಪ್ರಮಾಣ ಹಣ್ಣುಗಳು ಇರುತ್ತವೆ.

★ *ಅಭಿನಯದಲ್ಲಿ ನಿರಂತರ ನಿಮ್ಮನ್ನು ಕಾಡುವುದು...*

ನಾಟ್ಯ. ನಾನು ಭರತನಾಟ್ಯವನ್ನು ವಿದ್ವಾನ್ ಸುಮಾ ರಾಮಪ್ರಸಾದ್ ಅವರ ಬಳಿ 15 ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದೇನೆ. ಅದು ನಟನೆಯ ವಿವಿಧ ಆಯಾಮಗಳನ್ನು ಪರಿಚಯಿಸಿದೆ. ಈಗ ನನ್ನ ಸಹಾಯಕ್ಕೆ ಅದಿದೆ ಎನ್ನುವುದು ನನ್ನ ಅನುಭವ.

★ *ಕಾಲೇಜು ರಂಗ ತಂಡದಲ್ಲಿ ಭಾಗವಹಿಸಿದ್ದು...*

ಕಾಲೇಜಿನಲ್ಲಿ ಒಳ್ಳೆಯ ರಂಗ ತಂಡವಿತ್ತು. ದುರದೃಷ್ಟ ಎಂದರೆ, ನಾನು ‘ಬಿ.ವೋಕ್’ (B.Voc) ಸೇರಿದ್ದೆ. ಅದು ವಿಜ್ಞಾನದ ವೃತ್ತಿ ಶಿಕ್ಷಣ ಸಂಬಂಧಿ ಹೊಸ ಕೋರ್ಸ್. ಅದರಿಂದಾಗಿ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲ. ಬೇರೆ ವಿಭಾಗದವರಿಗೆ ಬಿಡುವಿದ್ದಾಗಲೇ ನಮಗೆ ತರಗತಿಗಳು ಇರುತ್ತಿದ್ದವು. ಇದೇ ಕಾರಣಕ್ಕೆ ಅಲ್ಲಿ ಹೆಚ್ಚು ಸ್ನೇಹಿತರೂ ಸಿಗಲಿಲ್ಲ.

■ ರಾಗು